100 ಕೋಟಿ ರೂಪಾಯಿಗಳಷ್ಟು ಸ್ಕ್ಯಾಂಡಿಂಗ್ ಕ್ರಾಪ್ಸ್ ಹಾಳಾಗುತ್ತಿದೆ. ಅದರ ಬಗ್ಗೆ ಅವರು ಪ್ರಸ್ತಾಪ ಮಾಡಬೇಕೆಂದಿದ್ದಾರೆ, ಅದಕ್ಕಾಗಿ 5 ನಿಮಿಷ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ, ಹಾವು ಆಯಿತು, ಚೇಳು ಆಯಿತು, ಸರಿ ಆಯಿತು ಅವರು ರೈತರ ಸಮಸ್ಯೆ ಬಗ್ಗೆ 5 ನಿಮಿಷ ಮಾತನಾಡುತ್ತಾರೆ.

ಅಧ್ಯಕ್ಷರು : ಪ್ರಸ್ತಾಪ ಮಾಡಬಾರದು ಅಂತಲ್ಲ, ಇರಿಗೇಷನ್ ವಿಷಯವನ್ನು ಚರ್ಚೆಗೆ ತೆಗೆದುಕೊಂಡಾಗ ಹೇಗಿದ್ದರೂ ಚೀಫ್ ಮಿನಿಸ್ಟರ್ ರಿಪ್ಲೈ ಕೊಡಬೇಕು, ಆಗ ಕಾಂಪ್ರಹೆನ್ಸೀವ್ ಆಗಿ ಅದನ್ನೂ ಸೇರಿಸಿ ಉತ್ತರ ಕೊಡುತ್ತಾರೆ. ಪ್ರತ್ಯೇಕವಾಗಿ ಹೇಳುವುದು ಬೇಡ ಅಂತ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ನಾವೂ ಒಪ್ಪಿಕೊಳ್ಳುತ್ತೇವೆ, ಆದರೆ ಇದಕ್ಕಿಂತಲೂ ಮುಂಚೆ ಪ್ರಸ್ತಾಪ ಮಾಡಿದಾಗಲೂ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ 8ನೇ ತಾರೀಖಿನ ನಂತರ ನೀರು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಅಲ್ಲಿ ಸತ್ಯಾಗ್ರಹ ಮಾಡಿದ ಮೇಲೆ, ಠಸ್ತೆ ರೋಕೋ ಮಾಡಿದ ಮೇಲೆ, ಹೌಸಿಂಗ್ ಮಿನಿಸ್ಟರ್‌ರವರು ಟೆಲಿಫೋನ್ ಮಾಡಿ ಪ್ರತಿ ದಿವಸ 3,500 ಕ್ಯೂಸೆಕ್ಸ್ ನೀರು ಬಿಡುವುದಕ್ಕೆ ಹೇಳಿಸುತ್ತೇನೆಂದು ಹೇಳಿದರು. ಆದರೆ, ಅಲ್ಲಿ ನೀರು ಬಿಡಲಿಲ್ಲ. ಆದ್ದರಿಂದ, ಅಲ್ಲಿಗೆ ಯಾವ ಶಾಸಕರೂ ಹೋಗುವ ಹಾಗಿಲ್ಲ. ಅಲ್ಲಿಗೆ ಸರ್ಕಾರದವರು ಯಾರಾದರೂ ಹೋದರೆ ಲಾ ಅಂಡ್ ಆರ್ಡರ್ ಪರಿಸ್ಥಿತಿ ಉಂಟಾಗುವ ಸ್ಥಿತಿಯಲ್ಲಿದೆ. ಆದ್ದರಿಂದ ಇದರ ಬಗ್ಗೆ ವಿಶೇಷವಾಗಿ ಚಿಂತನೆ ಮಾಡುವುದಕ್ಕೆ ಸಾಧ್ಯವಿದ್ದರೆ ಹೇಳಲಿ, ಲಾಸ್ಟ್ ಟೈಮ್‌ನಲ್ಲಿ ಕಾಲಿಂಗ್ ಅಟೆನ್‌ಷನ್ ಮೇಲೆ ಚರ್ಚೆ ನಡೆದಂಥ ಸಂದರ್ಭದಲ್ಲಿ ನೀರು ಬಿಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಈಗ ಅಲ್ಲಿ ಪರಿಸ್ಥಿತಿ ಏನಿದೆ ಎಂಬುದನ್ನು ವಿವರಣೆ ಕೊಡುವುದರ ಮೂಲಕ ಹೇಳಲಿ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

I. ಶ್ರೀ ಆರ್.ಎಲ್.ಜಾಲಪ್ಪ (ಕಂದಾಯ ಮಂತ್ರಿ) ಅವರು :

1957ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯ 9(2) ನೇ ಕಲಮಿನ ಮೇರೆಗೆ ;

ಬೆಳಗಾಂ ಜಿಲ್ಲೆ, ಅಥಣಿ ತಾಲ್ಲೂಕು, ಘಟನಟ್ಟಿಯ ಶ್ರೀ ಶಿವಯೋಗಿ ಕೃಷಿ ಅಭಿವೃದ್ಧಿ ಸಂಘವು ಪಿ.ಎಲ್.ಡಿ. ಬ್ಯಾಂಕ್, ಅಥಣಿಯಲ್ಲಿ ಏತ ನೀರಾವರಿಗೆ ರೂ.12.00 ಲಕ್ಷ ಸಾಲ ಪಡೆಯಲು ಬರೆದುಕೊಡುವ ಪತ್ರಕ್ಕೆ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 24.3.95 ರಂದು ಹೊರಡಿಸಲಾದ ಆರ್‌ಡಿ 258 ಇಎಸ್‌ಆರ್ 94ನೇ ಕ್ರಮಾಂಕದ ಅಧಿವೇಶನವನ್ನು ಮಂಡಿಸುತ್ತೇನೆ.

II. ಶ್ರೀ ಸಿ.ಭೈರೇಗೌಡ (ಕೃಷಿ ಮಂತ್ರಿ) : ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಮಂತ್ರಿ) : ಅವರ ಪರವಾಗಿ ಮಾನ್ಯ ಅಧ್ಯಕ್ಷರೆ; 1994 ನೇ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 311 ನೇ ಕಲಮಿನ ಮೇರೆಗೆ;

1) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ಗಳಿಂದ ಅಥವಾ ಅದರ ವಿರುದ್ಧ ಸ್ವತ್ತಿನ ಕ್ಲೈಮ್‌ಗಳು) (ನಿಯಮ 1994ರ ಬಗ್ಗೆ ದಿನಾಂಕ 9.3.1995ರಂದು ಹೊರಡಿಸಲಾದ ಗ್ರಾಅಪ 953 ಜಿಪಸ 94ರ ಅಧಿಸೂಚನೆ;)

2) ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಸಭಾ ಸಭೆಗಳನ್ನು ನಡೆಸುವ) ನಿಯಮಗಳ 1994ರ ಬಗ್ಗೆ ದಿನಾಂಕ 6.3.95 ರಂದು ಹೊರಡಿಸಲಾದ ಗ್ರಾಅಪ 886 ಜಿಪಸ 94ರ ಅಧಿಸೂಚನೆ;.

3) ಕರ್ನಾಟಕ ಪಂಚಾಯತ್‌ರಾಜ್ (190ನೇ ಪ್ರಕರಣದ ಮೇರೆಗೆ ಸೂಚನೆಯ ನೋಟೀಸನ್ನು ಪ್ರಕಟಿಸುವ ರೀತಿ) ನಿಯಮಗಳು 1994ರ ಸಂಬಂಧದಲ್ಲಿ ದಿನಾಂಕ 6.3.95 ರಂದು ಹೊರಡಿಸಲಾದ ಗ್ರಾಅಪ 954 ಜಿಪಸ 94ರ ಅಧಿಸೂಚನೆ;

4) ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಪಂಚಾಯತಿಗಳಿಗೆ ವಂತಿಗೆ ನಿರ್ಧರಣೆ) ನಿಯಮಗಳು 1994ರ ಸಂಬಂಧದಲ್ಲಿ ದಿನಾಂಕ 6.3.95ರಂದು ಹೊರಡಿಸಲಾದ ಗ್ರಾಅಪ 1133ಜಿಪಸ 94ರ ಅಧಿಸೂಚನೆ;

5) ಕರ್ನಾಟಕ ಪಂಚಾಯತ್‌ರಾಜ್ (ಚುನಾವಣೆ ನಡೆಸುವ) (2ನೇ ತಿದ್ದುಪಡಿ) ನಿಯಮಗಳು 1995ರ ಬಗ್ಗೆ ದಿನಾಂಕ 7.3.1995ರಂದು ಹೊರಡಿಸಲಾದ ಗ್ರಾಅಪ 200 ಜಿಪಸ 94ರ ಅಧಿಸೂಚನೆ;

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 300 (5)ನೇ ಕಲಮಿನ ಮೇರೆಗೆ;

1) 1993-1994ನೇ ಸಾಲಿನ ರಾಯಚೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ);

2) 1993-94ನೇ ಸಾಲಿನ ಕೊಡಗು ಜಿಲ್ಲಾ ಪಂಚಾಯತ್‌ನ ಏಳನೇ ವಾರ್ಷಿಕ ಆಡಳಿತ ವರದಿ (ಜ್ಞಾಪನಾಪತ್ರದೊಂದಿಗೆ)ಗಳನ್ನು ಮಂಡಿಸುತ್ತೇನೆ ;

III.ಶ್ರೀ ಸಿ.ಚೈರೇಗೌಡ (ಕೃಷಿ ಮಂತ್ರಿ) ಶ್ರೀ ಆರ್.ವಿ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿ ಅವರ ಪರವಾಗಿ ಮಾನ್ಯ ಅಧ್ಯಕ್ಷರೇ, 1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ;

1993-94ನೇ ಸಾಲಿನ ಚಾಮುಂಡಿ ಮೆಷಿನ್ ಟೂಲ್ಸ್ ನಿಯಮಿತದ 18ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

IV ಶ್ರೀ ಸಿ.ಚೈರೇಗೌಡ (ಕೃಷಿಮಂತ್ರಿ) : ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿ) ಅವರು ಪರವಾಗಿ ಮಾನ್ಯ ಅಧ್ಯಕ್ಷರೆ, 1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 20ರ ಕಲಮಿನ ಮೇರಗೆ;

ಬಳ್ಳಾರಿ ಜಿಲ್ಲೆಯ ದೋಣಿಮಲೈನಲ್ಲಿರುವ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್‌ರವರು ಅವರ ಸಭಾಂಗಣದಲ್ಲಿ

35ಮಿ.ಮೀ.ಚಲನಚಿತ್ರವನ್ನು ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 5.4.95ರಂದು ಹೊರಡಿಸಲಾದ ಹೆಚ್.ಡಿ.91 ಸಿಎನ್ಎ 94ರ ಆದೇಶವನ್ನು ಮಂಡಿಸುತ್ತೇನೆ.

ಜೀವರಾಜ್ ಆಳ್ವ : ಮಾನ್ಯ ಅಧ್ಯಕ್ಷರೆ, ಸಭಾ ನಡವಳಿಕೆ ಬಗ್ಗೆ ಪತ್ರಿಕೆಗಳಲ್ಲಿ ವಿಶ್ಲೇಷಣೆ ನಡೆದರೆ ಅದು ಚೆನ್ನಾಗಿರುವುದಿಲ್ಲ, ಚೆನ್ನಾಗಿತ್ತು, ಕಾವೇರಿತ್ತು, ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ಮೊನ್ನೆ ರೇಷ್ಮೆ ಇಲಾಖೆ ಮಾತನಾಡುತ್ತಿದ್ದಾಗ In my own sincere way, I was totally ignorant. ನನಗೆ ರೇಷ್ಮೆ ಇಲಾಖೆ ಬಗ್ಗೆ, ರೇಷ್ಮೆ ಗ್ರಾಹಕರ ಬಗ್ಗೆ ವಿಚಾರಗಳು ಗೊತ್ತಿಲ್ಲದಿದ್ದರೂ ಕೂಡ On the taxation system, Adam Smith ಕ್ವೋಟ್ ಮಾಡಿ The Architect of modern taxation - I quoted and I gave it a different plan altogether,. The taxation structure has to be imporved. ಎಂದು ಹೇಳುತ್ತಿದ್ದಂಥ ಪ್ರಸಂಗಧಲ್ಲಿ, ಮಾತುಕತೆ ಆಯಿತು, ಭೈರೇಗೌಡರು ಏನು ಹೇಳಿದರು? ತಾವು ಅದಕ್ಕೆ ಅವರ ಮಾತಿನ ಧಾಟಿ ಹಾಗೆ ಅದರಲ್ಲಿ ತಪ್ಪು ತಿಳಿದುಕೊಳ್ಳಬೇಡಿ ಎಂದು ಹೇಳಿದ ಮೇಲೆ ಅಲ್ಲಿಗೆ ನಾವು ಸಮಾಧಾನವಾಗಿ ಕುಳಿತೆವು. ಒಂದು ಪತ್ರಿಕೆಯಲ್ಲಿ ಈ ಬಗ್ಗೆ ಏನು ಬರೆದಿದೆ ಎಂದರೆ 'ವಿಚಾರ ಗೊತ್ತಿಲ್ಲದೆ ಮಾತನಾಡಿದರೆ ಈ ತರಹ ಅವಕಾಶಗಳಿಗೆ ಪ್ರಚೋದನೆಯಾಗುತ್ತದೆ, ವಿಧಾನ ಸಭೆಗೆ ತೊಂದರೆಯಾಗುತ್ತದೆ' ಎಂದು ಬಂದಿದೆ. It reflects; it has come in a special boxed item in one paper 'Samyuktha Karnataka' ಅದು 'ಸಂಯುಕ್ತ ಕರ್ನಾಟಕ' ಎಂದು ಹೇಳುತ್ತೇನೆ, ವಿಶ್ಲೇಷಣೆ ಮಾಡಿ ನಮ್ಮ ಚಹರೆಗಳನ್ನು ಹೇಳಲಿ. ಆದರೆ, This is the regular proceedings of the House. Whatever I said, it reflects on me. ಏನಾದರೂ ಹೇಳಿದರೆ, ಜೀವರಾಜ್ ಆಳ್ವಗೆ ಏನೂ ಗೊತ್ತಿಲ್ಲ ಅಂದರೆ, ನನಗೆ ಏನೂ ಗೊತ್ತಿಲ್ಲವೆಂದು ಹೇಳಿದೆ. I spoke on a different thing altogether on the entire taxation system. I gave a very very sincere suggestion to the Government, So that they could improve update It. The Sanctity should be maintained.

ಅಧ್ಯಕ್ಷರು : ತಮಗೆ ಇಷ್ಟು ಆಶ್ವಾಸನೆಯನ್ನು ಕೊಡುತ್ತೇನೆ, ಸಂಬಂಧಪಟ್ಟ ಪತ್ರಿಕೆಯವರನ್ನು ಕರೆಯಿಸಿ ವಿಚಾರಿಸಿಕೊಂಡು ಸೂಕ್ತವಾದ ತಿಳುವಳಿಕೆ ಕೊಟ್ಟು, ಹೀಗೆ ಆಗುವುದು ಬೇಡ, ಇದು ತಪ್ಪು ಅರ್ಥಕ್ಕ ಅವಕಾಶವಾಗುತ್ತದೆ, ಇದಕ್ಕೆ ತಿದ್ದುಪಡಿ ಬರೆಯಿಲಿಕ್ಕೆ ಅವರಿಗೆ ತಿಳಿಸುತ್ತೇನೆ.

ನಿಯಮ 159ರ ಮೇರೆಗೆ